## ಸ್ತ್ರೀ ಸೇನಾನಿ

ಮಾರ್ಚ್ 5ರ ಸುಧಾದಲ್ಲಿ ನೇಮಿಚಂದ್ರ ಅವರು ಬರೆದ 'ಸ್ತ್ರೀ ಸೇನಾನಿ' ಲೇಖನ ಅಂತಾರಾಷ್ಟ್ರೀಯ ಮಹಿಳಾ ದಿನಕ್ಕೆ ಅದ್ಭುತ ಕೊಡುಗೆ. ವಿಶ್ವ ಹೆಮ್ಮೆಪಡುವ ವೀರ ವನಿತೆಯರು ಆಗಿಹೋಗಿರುವ ನಮ್ಮ ದೇಶದಲ್ಲಿ, ವಾಯುಸೇನೆ ಸೇರಲು ಮಹಿಳೆಗೆ 45 ವರ್ಷ ಕಾಯಬೇಕಾಯಿತು. 'ನನ್ನ ದೇಹ ನನ್ನ ವಿಧಿಯಲ್ಲ' ಅನ್ನುವ ಮಾತನ್ನು ಮಹಿಳೆ ಸಾಬೀತುಪಡಿಸುತ್ತಾ ಬಂದಿದ್ದಾಳೆ. ಸ್ವಾಭಿಮಾನಿ ಹೆಣ್ಣಿಗೆ ರೋಮಾಂಚನವಾಗುವ ಮಾತಿದು. 'ನಮ್ಮ ಕಾಲು ಕಟ್ಟಿ ನೀವು ಓಡಲಾರಿರಿ, ಗೆಲ್ಲಲಾರಿರಿ' ಅನ್ನುವುದು ಮಹಿಳೆಗೆ ತನ್ನ ಮೇಲಿರುವ ನಂಬಿಕೆಯ ಮಾತು. ನಮ್ಮ ದೇಶದ ರಾಜಕೀಯದಲ್ಲಿ ಸ್ತ್ರೀಗೆ ಸಮಾನತೆ ಇಲ್ಲ. ಆ ನಿಟ್ಟಿನಲ್ಲಿ ಲಕ್ಷ್ಯ ಮತ್ತು ಹೋರಾಟದ ಅವಶ್ಯಕತೆ ಇದೆ.

—ವಿನುತಾ ಹಂಚಿನಮನಿ ಧಾರವಾಡ,
ಎಡ್ವರ್ಡ್ ರೊಡ್ರಿಗಸ್ ಎಸ್. ಜೆ. ಬೆಂಗಳೂರು

'ಸ್ತ್ರೀ ಸೇನಾನಿ' ಮುಖಪುಟದ ಲೇಖನ ಮಹಿಳೆಯರು ಅವಕಾಶ ಸಿಕ್ಕರೆ ಏನೆಲ್ಲ ಸಾಹಸ ಮಾಡಬಲ್ಲರು ಎಂಬುದಕ್ಕೆ ಸಾಕ್ಷಿಯಂತಿದೆ. ಯುದ್ಧರಂಗದಲ್ಲಿ ಮಹಿಳೆ ತೊಡಗಿಸಿಕೊಂಡ ಮಹಿಳಾ ಮಾದರಿಯ ಈ ಕಥನ ಸೂಜಿಗಲ್ಲಿನಂತೆ ಸೆಳೆದು ಓದಿಸಿಕೊಳ್ಳುತ್ತದೆ. ತಮ್ಮ ವೃತ್ತಿಬದುಕಿನ ಏರಿಳಿತ, ತವಕ ತಲ್ಲಣಗಳನ್ನು ನಿಭಾಯಿಸಿದ ಅನುಭವವನ್ನು ಓದುಗರಿಗೆ ತಾಕುವ ಹಾಗೆ ಬರೆದಿದ್ದಾರೆ.

—ಶಿವರಾಜ್ ಬ್ಯಾಡರಹಳ್ಳಿ,
ಮಧುರಾ ಸುಬ್ರಹ್ಮಣ್ಯ, ಬೆಂಗಳೂರು

'ಸ್ತ್ರೀ ಸೇನಾನಿ' ತುಂಬಾ ಚೆನ್ನಾಗಿ ಮೂಡಿಬಂದಿದೆ. ಪುರುಷ ವರ್ಗ ಎಷ್ಟು ವ್ಯವಸ್ಥಿತವಾಗಿ ಹೆಣ್ಣುಮಕ್ಕಳನ್ನು ಸಮಾಜದ ಮುನ್ನೆಲೆಗೆ ಬರದಂತೆ ಅವಳ ದೈಹಿಕ ಸ್ಥಿತಿಯ ನೆಪವೊಡ್ಡಿ, ಅನೇಕ ನಿಬಂಧನೆಗಳನ್ನು ಹಾಕಿ, ಮನೆ, ಮಕ್ಕಳ ಜವಾಬ್ದಾರಿ ಅವಳದೆಂದು ಹೇಳುತ್ತ ಅವಳನ್ನು ಹತ್ತಿಕ್ಕಲು ಪ್ರಯತ್ನಿಸಿದರೂ ಛಲದಿಂದ ಹೆಣ್ಣು ಮಕ್ಕಳು ಇಂದು ಎಲ್ಲಾ ರಂಗಗಳಲ್ಲೂ ತಮ್ಮ ಛಾಪನ್ನು ಒತ್ತಿದ್ದಾರೆ. ಭಾರತೀಯ ಸೇನೆಯಲ್ಲಿ ಮಹಿಳಾ ಅಧಿಕಾರಿಗಳಿಗೆ ಕಮಾಂಡ್ ಹುದ್ದೆಗಳ ನಾಯಕತ್ವದ ಸ್ಥಾನ ನೇಮಕದಲ್ಲಿ ಮಹಿಳೆಯರಿಗೂ ಅವಕಾಶ ಇರಬೇಕೆನ್ನುವ ತೀರ್ಪು ಕೊಟ್ಟ ಸುಪ್ರೀಂ ಕೋರ್ಟ್, ಮಹಿಳೆಯರ ಮುಡಿಗೆ ಇನ್ನೊಂದು ಗರಿ ಮೂಡುವಂತೆ ಮಾಡಿರುವುದು ಮಹಿಳಾ ದಿನಾಚರಣೆಯ ಹೊಸ್ತಿಲಲ್ಲಿ ನಿಜಕ್ಕೂ ಹೆಮ್ಮೆಯ ವಿಷಯ. ನೊಬೆಲ್ ಪಾರಿತೋಷಕ ವಿಜೇತ ಸರ್ ಸಿ.ವಿ ರಾಮನ್‌ರಂಥ ದಿಗ್ಗಜರಿಗೂ, ಹೆಣ್ಣು ಮಕ್ಕಳಿಗೆ ವಿಜ್ಞಾನ ರಂಗಕ್ಕೆ ಪ್ರವೇಶ ಇರಬಾರದೆಂಬ ವಿಚಾರಧಾರೆ ಇದ್ದಿದ್ದು ತಿಳಿದು ನಿಜಕ್ಕೂ ದಿಗ್ಭ್ರಮೆಯಾಯಿತು.

—ಪುಷ್ಪಾ ಹಾಲಭಾವಿ,
ಧಾರವಾಡ



### ನಳನಳಿಸುವ ಕೊಳಂಬೆ

ಮಾರ್ಚ್ 5ರ ಸಂಚಿಕೆಯಲ್ಲಿ ಚಂದ್ರಹಾಸ ಚಾರ್ಮಾಡಿ ಬರೆದ 'ನಳನಳಿಸುತ್ತಿದೆ ಕೊಳಂಬೆ' ಬರಹ ಚೆನ್ನಾಗಿದೆ. ನೆರೆ ಅಬ್ಬರಕ್ಕೆ ಸಿಕ್ಕಿ ಬದುಕು ಕಳೆದುಕೊಂಡ ಕೊಳಂಬೆ ಊರನ್ನು ಪುನರುಜ್ಜೀವನಗೊಳಿಸಿದ 'ಬದುಕು ಕಟ್ಟೋಣ ಬನ್ನಿ' ತಂಡದ ಕಾರ್ಯ ಶ್ಲಾಘನೀಯ.

—ದೆಗ್ಗನಹಳ್ಳಿ ಆನಂದ್, ಕೆ.ಆರ್.ನಗರ,
ಜಯವಂತ ಪೈ, ಕುಂದಾಪುರ



### ಮುಟ್ಟಿದವನ ಪಾಡು

ಫೆ. 27ರ ಸಂಚಿಕೆಯಲ್ಲಿ ಗೌರಿ ಬರೆದ 'ಟಚ್' ಕಿರುಚಿತ್ರದ ಕುರಿತ ಲೇಖನ (ಮುಟ್ಟಿದವನ ಪಾಡು) ಚೆನ್ನಾಗಿದೆ. ದುರುದ್ದೇಶವಿಲ್ಲದೆ, ಪುಟ್ಟ ಬಾಲಕನ ಮರ್ಮಾಂಗ ಮುಟ್ಟಿದ್ದಕ್ಕೆ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿದ್ದು ನಿಜಕ್ಕೂ ವಿಪರ್ಯಾಸ. ಪರೋಪಕಾರಿಯಾದವನಿಗೆ ಜೈಲು ಮತ್ತು ಅವಮಾನಗಳನ್ನು ನೋಡಿ ಮನಕಲುಕಿದಂತಾಗುತ್ತದೆ.

—ಚನ್ನವೀರಪ್ಪ ಬಿದರಹಳ್ಳಿ, ಹಿರೇಹಡಗಲಿ

### ಹಕ್ಕಿಗಳೇ ಬಿಟ್ಟುಹೋಗದಿರಿ

ಮಾರ್ಚ್ 5ರ ಸಂಚಿಕೆಯ 'ನಿಮ್ಮೊಡನೆ'ಯಲ್ಲಿ ಎನ್. ಉದಯಕುಮಾರ್ ಅವರು ಬರೆದ ಲೇಖನ 'ಹಕ್ಕಿಗಳೇ ನಮ್ಮನ್ನು ಬಿಟ್ಟುಹೋಗದಿರಿ' ಓದಿದೆ. ಪಕ್ಷಿಗಳ ಕಲರವ ನಿಜಕ್ಕೂ ಕ್ಷೀಣಿಸುತ್ತಾ ಸಾಗಿದೆ. ಬದಲಾದ ಮನೆಗಳ ವಾಸ್ತುವಿನ್ಯಾಸದಿಂದಾಗಿ ಗುಬ್ಬಚ್ಚಿಗಳಿಗೆ ಗೂಡು ಕಟ್ಟಿಕೊಳ್ಳಲು ಕಷ್ಟವಾಗಿದೆ. ಆದರೆ ಸಣ್ಣ ಮರದ ಪೆಟ್ಟಿಗೆ ಅಥವಾ ಒಂದು ಚಿಕ್ಕ ಬಿದಿರಿನ ಬೊಂಬನ್ನು ಮನೆಯಂಗಳದಲ್ಲಿ, ಅಲ್ಲಲ್ಲಿ ಕಟ್ಟಿದರೆ ಗುಬ್ಬಚ್ಚಿಗಳು ಗೂಡು ಕಟ್ಟಲು ಅನುಕೂಲವಾಗುತ್ತದೆ. ಸಮುದಾಯ ಅರಣ್ಯ ಬೆಳೆಸುವುದು, ಕಾಡುಗಳ ಸಂರಕ್ಷಣೆ, ಬೇಟೆಯನ್ನು ತಡೆಯುವುದು, ಸಾವಯವ ಕೃಷಿ ಬಳಕೆ ಮುಂತಾದ ಕ್ರಮಗಳನ್ನು ಕೈಗೊಂಡರೆ ಹಕ್ಕಿಗಳ ನಿರ್ಗಮನವನ್ನು ಶಾಶ್ವತವಾಗಿ ತಡೆಯಬಹುದು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

### ಜೀತಪದ್ಧತಿಗೆ ಕೊನೆಯೆಲ್ಲಿ?

ಫೆಬ್ರುವರಿ 27ರ 'ನಿಮ್ಮೊಡನೆ' ಪುಟದಲ್ಲಿ ಪ್ರಕಟವಾದ ರಘುನಾಥ ಚ.ಹ. ಬರೆದ 'ಹೊಸರೂಪಗಳಲ್ಲಿ ಜೀತಪದ್ಧತಿ ಕೊನೆಯೆಂದು? ಪರಿಹಾರ ಹೇಗೆ?' ಲೇಖನ ಓದಿ ಖೇದವಾಯ್ತು. ಮಾನವನ ದುರಾಸೆಯ ಕರಾಳರೂಪ ಸ್ಮೃತಿಪಟಲದಲ್ಲಿ ಓಡಾಡಿತು. ಕೂಲಿ ಕಾರ್ಮಿಕರನ್ನು ಕೈಕಾಲು ಕಟ್ಟಿ ದಂಡಿಸಿ ದುಡಿಸುವ ಕಠಿಭಾಯೆ ಮತ್ತು ಮಾನವನ ಕಳ್ಳಸಾಗಾಣಿಕೆಯ ವಿಕೃತ ಶೋಷಣೆ ನಿಜಕ್ಕೂ ಹೃದಯ ಹಿಂಡುತ್ತದೆ. ಸರ್ಕಾರದ ಸರ್ವರಿಗೆ ಸಮಪಾಲು – ಸಮಬಾಳು ಎನ್ನುವ ಘೋಷಣೆ ಮರೀಚಿಕೆಯಾಗಿದೆ.

—ಮಲ್ಲಿಕಾರ್ಜುನ ಗಚ್ಚಿ, ಗೋಗಿ

### ಶಾಲ್ಮಲೆಯ ಸಹಸ್ರಲಿಂಗ

ಫೆ. 27ರ ಸಂಚಿಕೆಯಲ್ಲಿ 'ಶಾಲ್ಮಲೆ ಶಿವನಾಮ ಹಾಡುವ ಸಹಸ್ರಲಿಂಗ' ಲೇಖನ (ಕಲಗಾರು ಲಕ್ಷ್ಮಿನಾರಾಯಣ ಹೆಗಡೆ) ಚೆನ್ನಾಗಿದೆ. ಅಭಿಷೇಕ ಪ್ರಿಯನಾದ ಶಿವನಿಗೆ ಶಾಲ್ಮಲೆ ಅನುದಿನವೂ ಅಭಿಷೇಕ ಮಾಡುತ್ತಿದ್ದಾಳೆ.

—ಎ.ಕೆ. ಪಟ್ಟಾಭಿ, ಬೆಂಗಳೂರು

## ಬಾಲಸಾಹಿತ್ಯ ರಚನಾ ಕಾರ್ಯಾಗಾರ

ಮಕ್ಕಳಿಗಾಗಿ ಕನ್ನಡದಲ್ಲಿ ಕಥೆ, ಕವನ, ಪ್ರಬಂಧ ರಚಿಸುವವರಿಗಾಗಿ ಟಾಟಾ ಟ್ರಸ್ಟ್‌ನ 'ಪರಾಗ್' ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್‌ನವರು ಜಂಟಿಯಾಗಿ ಉಚಿತ ತರಬೇತಿ ಕಾರ್ಯಾಗಾರ ನಡೆಸಲಿದ್ದಾರೆ. ಏಪ್ರಿಲ್ 15, 16 ಮತ್ತು 17ರಂದು ಬೆಂಗಳೂರಿನ ಸಮೀಪ ನಡೆಯಲಿದೆ. ಹಿರಿಯ ಲೇಖಕ ನಾಗೇಶ ಹೆಗಡೆ ಮತ್ತು ಸಾಹಿತಿ ವಸುಧೇಂದ್ರರ ನೇತೃತ್ವದಲ್ಲಿ ಈ ಕಾರ್ಯಾಗಾರ ನಡೆಸಲಾಗುವುದು. ಆಸಕ್ತರು ತಮ್ಮ ಕಿರುಪರಿಚಯ ಮತ್ತು 300 ಪದಗಳ ಸ್ವಂತದ ಬರಹವನ್ನು jeevithac@tatatrusts.org. ಅಥವಾ ವಾಟ್ಸ್‌ಆ್ಯಪ್ ಮೂಲಕ 9845860817ಕ್ಕೆ ಮಾರ್ಚ್ 15ರೊಳಗೆ ಕಳುಹಿಸಬಹುದು. ಆಯ್ಕೆಯಾದವರಿಗೆ ಮಾರ್ಚ್ 30ರೊಳಗೆ ತಿಳಿಸಲಾಗುವುದು.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in